
**ಆತ ದುಃಖ ಮತ್ತು ತಿರಸ್ಕಾರದಿಂದ ಹೇಳಿದ, ‘ಬರೀ ಒಂದು ಸಾಮಾನ್ಯ ಭಿಕ್ಷೆ ಬೇಡೋಕೆ ಬಂದಿದಿನಿ ನಾನು. ದುಡ್ಡು ಕಾಸು ಏನೂ ಬೇಡ. ಬರೀ ಒಂಚೂರು ವಿಳಾಸ ಕೊಟ್ಟರೆ ಸಾಕು. ಅಷ್ಟಕ್ಕೇ ನನ್ನ ಪೊಲೀಸ್‌ಗೆ ಹಿಡಿದುಕೊಡ್ತೀರಾ? ದೊಡ್ಡೋರ ಜಾತಿಯೇ ಹೀಗೆ. ಮನಸ್ಸಿಲ್ಲ, ಹೃದಯವಿಲ್ಲ.**



ಅವನೇನು ಕೈಗೆ ಗಡಿಯಾರ ಕಟ್ಟಿದ್ದಾನಾ?

ನಿಮಾಯ್ ಬಂದು ಹೇಳಿದ, “ಅವನು ಬಂದಿದ್ದಾನೆ”.

ಅಸಿತ್ ಗಡಿಯಾರ ನೋಡಿದ, ಸರಿಯಾಗಿ ಎಂಟು ಗಂಟೆ... ಇವನಾ ನತದೃಷ್ಟ, ಮುಗ್ಧ? ಅಸಹಾಯಕ?

ಅಸಿತ್ ತನ್ನನ್ನು ತಾನು ದೃಢಗೊಳಿಸಿಕೊಂಡು ಕೇಳಿದ, “ಮಧ್ಯಾಹ್ನ ಬಂದು ಮನೆ ಹೆಣ್ಮಕ್ಕಳಿಗೆ ಯಾಕೆ ತೊಂದರೆ ಕೊಟ್ಟಿದ್ದಿಯಾ?”

ಅವನ ಮುಖ ಎಷ್ಟು ಕುರೂಪಿಯಾಗಿತ್ತೆಂದರೆ ಸುಖವೊ ದುಃಖವೊ ಹೇಳಲಾಗುತ್ತಿಲ್ಲ. ಆದರೆ, ಅವನಿಗೆ ಆಶ್ಚರ್ಯವಾಯಿತು ಎಂಬುದು ಗೊತ್ತಾಯಿತು. “ನಾನೇನೂ ತೊಂದರೆ ಕೊಟ್ಟಿಲ್ಲ ಬಾಬು, ದೀದಿಮೋನಿಗೆ (ಅಕ್ಕನವರಿಗೆ) ನನ್ನ ಕಷ್ಟ ಹೇಳ್ಕೊಂಡೆ. ನಂದು ತುಂಬಾ ದುಃಖದ ಕತೆ ಬಾಬು.”

ಅಸಿತ್ ಏನು ಹೇಳಬೇಕೆಂದು ಆಲೋಚಿಸಿಕೊಂಡಿದ್ದನೋ ಇದ್ದಕ್ಕಿದ್ದಂತೆ ಅದರ ಸೂತ್ರ ಹರಿದುಹೋಯ್ತು. ಹೇಳಬೇಕೆಂದುಕೊಂಡಿದ್ದು ಮರೆತುಹೋಯ್ತು. “ನಾನು ಏನು ಮಾಡಬೇಕು ಹೇಳು, ಒಂದಿಷ್ಟು ದುಡ್ಡು ಬೇಕಾದರೆ, ಸದ್ಯಕ್ಕೆ ಅಷ್ಟು ಸಹಾಯ ಮಾಡಬಲ್ಲೆ.”

ಅಸಿತ್ ಈ ರೀತಿ ಮಾತಾಡಬೇಕು ಅಂತ ಅಂದುಕೊಂಡಿರಲಿಲ್ಲ. ಹಾಗಾದರೆ ಇವನು ನಿಜಕ್ಕೂ ದುಃಖಿತನಾ? ಸತ್ಯ ಹೇಳ್ತಿದ್ದಾನಾ?

ಇಲ್ಲ! ಕಳ್ಳಖದೀಮನೇ! ಸಹಾಯ ಮಾಡುವ ಮಾತನ್ನು ಅವನು ಕಿವಿ ಮೇಲೆ ಹಾಕ್ಕೊಂಡಿಲ್ಲ. ಕೈ ಜೋಡಿಸಿ ಹೇಳಿದ, “ದುಡ್ಡು ಬೇಡ ಬಾಬು, ನನಗೆ ಕೇವಲ ಒಂದು ವಿಳಾಸ ಸಾಕು ಬಾಬು”.

ವಿಳಾಸ! ಅದೇ ಮಾತು. ಅಸಿತ್ ದೃಢ ಸ್ವರದಲ್ಲಿ ಕೇಳಿದ, “ವಿಳಾಸ! ಅದೆಂಥದು?”

“ದೀದಿಮೋನಿಗೆ ನಾನು ಎಲ್ಲ ಹೇಳಿದಿನಿ ಬಾಬು, ಈ ವಿಳಾಸ ಇಲ್ಲದೆ ಇರೋದ್ರಿಂದ್ಲೆ ನಾನು ಸರ್ಕಾರದಿಂದ ತಗೋಬೇಕಾಗಿರೋ ದುಡ್ಡನ್ನ ತಗೋಳೋಕೆ ಆಗ್ತಿಲ್ಲ. ನನ್ನ ಒಬ್ಬನೇ ಮಗ ಯುದ್ಧದಲ್ಲಿ ಸತ್ತುಹೋಗಿದ್ದಾನೆ. ಅದಕ್ಕೆ ಸರ್ಕಾರ ನನಗೆ ದುಡ್ಡು ಕೊಡುತ್ತೆ. ಆದರೆ, ಸರ್ಕಾರ ದುಡ್ಡನ್ನು ಎಲ್ಲಿಗೆ ಕಳಿಸುತ್ತೆ ಹೇಳಿ? ದಯವಿಟ್ಟು ನಿಮ್ಮ ವಿಳಾಸ ಕೊಡಿ ದಮ್ಮಯ್ಯ ಮತ್ತು ಒಂದು ಅರ್ಜಿ ಬರೆದುಕೊಡಿ, ನಿಮ್ಮ ಪಾದ. ಅರ್ಜಿಲಿ ಬರೀರಿ, ನಾನು ಮೃತನಾದ ಜಗತ್ ಝಾನ ಬಾಬಾ ಭುವನ್ ಝಾ, ನನಗೆ ಹಿಂದೆಮುಂದೆ ಯಾರೂ ಇಲ್ಲ. ಮಾನ್ಯ ಸರ್ಕಾರವೇ ದಯವಿಟ್ಟು ನನಗೆ...”

ಅಸಿತ್ ಅಷ್ಟೊತ್ತು ಅವನನ್ನು ಗಮನವಿಟ್ಟು ನೋಡಿದ. ಅವನ ಹತ್ತಿರ ಚಾಕು, ಚೂರಿ, ಬ್ಲೇಡ್ ಏನೂ ಇಲ್ಲ. ಬಲವಂತದಿಂದ ನುಡಿದ, “ನಿನ್ನ ಕತೆ ನಿಜವೇ? ಅದಕ್ಕೆ ಸಾಕ್ಷಿ ಏನು?”

ಹಠಾತ್ ಅವನು ತಬ್ಬಿಬ್ಬಾದಂತೆ ಕಂಡಿತು. “ನನ್ನ ಮಗನ ಹೆಸರಿಟ್ಟುಕೊಂಡು ಸುಳ್ಳು ಹೇಳ್ತೀನಾ ಬಾಬು?”

“ಜನ ಹಾಗೂ ಹೇಳ್ತಾರೆ.”